ಕರ್ನಾಟಕ ವಿಧಾನ ಸಭೆ
KARNATAKA LEGISLATIVE ASSEMBLY

Tuesday, the 28th July, 1981/Shravana, 1903 S.E.

The House met in the Assembly Chamber, Vidhana Soudha, at Twelve of the Clock.

MR. SPEAKER (SRI K.H. RANGANATH) in the Chair

STARRED QUESTIONS
To which oral answers were given.

Construction of Building for Agriculture School in Arkalgud Taluk

(3) SRI K.B. MALLAPPA (Arkalgud).—Will the Chief Minister be pleased to state :

(a) whether it has come to the notice of Government that the construction of Agricultural School building at Arkalgud has not been completed ;

(b) since how long this work has come to a stand still ;

(c) if so, the ressons for coming to a stand still ;

(d) will the Government would take action to complete the construction work atleast from hereafter ?

SRI R. GUNDU RAO.—(Chief Minister).

(a) Yes.

(b) The work has been held up since 1980.

(c) The work has been stopped at roof level due to non-availability of Iron and Steel.

(d) Yes.

ಶ್ರೀ ಕೆ.ಬಿ. ವಂಲ್ಲಪ್ಪ.—ನಮ್ಮ ಅರಕಲಗೂಡು ತಾಲ್ಲೂಕಿನಲ್ಲಿ ಕೃಷಿ ಶಾಲಾ ಕಟ್ಟಡದ ನಿರ್ಮಾಣ ಕಾರ್ಯ ಕಳೆದ ೨ ವರ್ಷಗಳಿಂದ ಸ್ಥಗಿತಗೊಂಡಿರುವುದಕ್ಕೆ ಸಿಮೆಂಟ್ ಮತ್ತು ಸ್ಟೀಲ್ ಸಿಕ್ಕದಿರುವುದೇ ಕಾರಣವೆಂದು ಹೇಳಿದ್ದೀರಿ.ಆದಕ್ಕೆ ಬೇಕಾಗಿರುವುದು ಕೇವಲ ೨೫೦-೩೦೦ ಮೂಟೆ ಸಿಮೆಂಟ್. ಇಷ್ಟಕ್ಕಾಗಿ ೨ ವರ್ಷದಿಂದ ಕೆಲಸ ನಿಂತಿದೆ ಎಂದು ಹೇಳುವುದು ತರವಲ್ಲ. ಇದೇ ರೀತಿ ಬಿಟ್ಟರೆ ಇನ್ನು ಮೂರು ತಿಂಗಳುಗಳಲ್ಲಿ ಕಟ್ಟಿರತಕ್ಕ ಭಾಗವೂ ಬಿದ್ದು ಹೋಗುತ್ತದೆ. ಆದ್ದರಿಂದ. ಇದನ್ನು ಯಾವಾಗ ಪೂರೈಸುತ್ತೀರಿ ಮತ್ತು ಪೂರೈಸುವುದಕ್ಕೆ ಏನು ಕಾರ್ಯಕ್ರಮ ಹಾಕಿಕೊಂಡಿದ್ದೀರಿ ಎಂದು ಕೇಳುತ್ತೇನೆ.

ಶ್ರೀ ಹೆಚ್. ಸಿ. ಶ್ರೀಕಂಠಯ್ಯ (ಮುಖ್ಯ ಮಂತ್ರಿಗಳ ಪರವಾಗಿ).—ಅಧ್ಯಕ್ಷರೇ, ಕಟ್ಟಡ ಕಟ್ಟ ತಕ್ಕದ್ದರಲ್ಲಿ ನಿಧಾನವಾಗಿರುವುದು ನಿಜ. ಕಬ್ಬಿಣ ಮತ್ತು ಸಿಮೆಂಟ್ ದೊರೆಯದೇ ಇರುವುದರಿಂದ ನಿಧಾನ ವಾಗಿದೆ ಎಂದು ಸರ್ಕಾರ ತಿಳಿಸಿದೆ. ಈಗ ಜಿಲ್ಲಾಧಿಕಾರಿಗಳಿಗೆ ಬರೆದು ೧ ಸಾವಿರ ಮೂಟೆ ಸಿಮೆಂಟ್ ಕಟ್ಟಡಕ್ಕೆ ಕೊಡಬೇಕು ಎಂದು ಸರ್ಕಾರ ಆದೇಶ ಕೊಟ್ಟಿದೆ. ಈಗಾಗಲೇ ೨೦೦ ಮೂಟೆ ಸಿಮೆಂಟನ್ನು ಜಿಲ್ಲಾಧಿಕಾರಿಗಳು ಕೊಟ್ಟಿದ್ದಾರೆ. ಕೆಲಸ ಪ್ರಾರಂಭವಾಗುತ್ತದೆ. ಒಟ್ಟು ೫೫,೩೫೦೦ ರೂಪಾಯಿ ಅಂದಾಜಿದ್ದು ಅದರ ಪೈಕಿ ೨೨,೪೨, ೩೦ ರೂಪಾಯಿ ಖರ್ಚಾಗಿದೆ. ತಾರ್ಸಿ ಮಟ್ಟಕ್ಕೆ ಕೆಲವು ಕಟ್ಟಡ ಬಂದಿದೆ. ಇನ್ನು ಕೆಲವು ಫೌಂಡೇಷನ್ ಮಟ್ಟದಲ್ಲಿದೆ. ದನಗಳ ಕೊಟ್ಟಿಗೆ ಕಟ್ಟಡ ಸಹ ಅರ್ಧದಲ್ಲಿ ಅಪೂರ್ಣವಾಗಿ ನಿಂತಿದೆ. ಅದನ್ನೆಲ್ಲಾ ಮುಗಿಸುವುದಕ್ಕೆ ಆದಷ್ಟು ಜಾಗ್ರತೆ ಸಿವಿ ಂಟ್ ಒದಗಿಸುವ ಪ್ರಯತ್ನವನ್ನು ಸರ್ಕಾರ ಮಾಡುತ್ತದೆ.

Bridge for Nyayada Halla in Arkalgud Taluk

(16) SRI K. B. MALLAPPA (Arkalgud).—Will the Minister for Transport and Minor Irrigation be pleassed to state :

(a) whether the Government have proposed to construct a dam at Nyayada Halla in Mallapatna Hobli, Arkalgud ;

(b) if so, whether plan and estimates have been prepared and its estimated cost ;

(c) whether it has been proposed to excavate canals on both right and left side of the embankment ;

(d) the acreage of land that would become wet and dry lands and the number of villages benefitted by constructing this embankment ?

SRI M. M. J. SADYOJATHA.—Minister for Transport and Minor Irrigation —

(a) Yes.
(b)]
(c)]
and] Survey of this project is being conducted
(d)]

ಶ್ರೀ ಕೆ. ಬಿ. ಮಲ್ಲಪ್ಪ.—ಮಾನ್ಯ ಅಧ್ಯಕ್ಷರೇ, ನನ್ನ ಪ್ರಶ್ನೆಗೆ ಉತ್ತರವಾಗಿ ಅರಕಲಗೂಡು ಮಲ್ಲ ಪಟ್ಟಣ ಹೋಬಳಿಯಲ್ಲಿ ಇರುವ ನ್ಯಾಯದ ಹಳ್ಳಕ್ಕೆ ಅಣೆಕಟ್ಟು ನಿರ್ಮಿಸುವ ಬಗ್ಗೆ ಸಮೀಕ್ಷೆ ನಡೆಯು ತ್ತಿದೆ ಎಂದು ಹೇಳಿದ್ದಾರೆ. ನನಗೆ ತಿಳಿದಹಾಗೆ ಈ ಯೋಜನೆಯ ಎಸ್ಟಿಮೇಟ್ ಆಗಿದೆ. ಈ ಅಣೆಕಟ್ಟಿಗೆ ಸರ್ವೇ ಮಾಡಿ ಎರಡು ಭಾಗದಲ್ಲಿ ಚಾನಲ್ ತೆಗೆಯಬೇಕೆಂಬ ಅಭಿಪ್ರಾಯ ಇದ್ದಾಗ ಎಡಭಾಗದ ಚಾನಲ್ ಡ್ರಾಪ್ ಮಾಡಿಸಿ ಬಲಭಾಗದ ಚಾನಲ್ ಮಾತ್ರ ತೆಗೆಯಬೇಕು ಎಂಬ ಪ್ರಯತ್ನ ನಡೆಯುತ್ತಿರುವುದರಿಂದ ಈ ಪ್ರಶ್ನೆಯನ್ನು ಹಾಕಲಾಗಿದೆ. ಒಳಗಡೆ ಏನೋ ಮಸಲತ್ತು ನಡೆಯುತ್ತಿದೆ ಎಂಬ ಉದ್ದೇಶದಿಂದಲೇ ಪ್ರಶ್ನೆ ಹಾಕಿದ್ದೇನೆ. ಎಡಭಾಗದಲ್ಲೂ ಕೂಡ ಚಾನಲ್ ತೆಗೆಯುವುದಕ್ಕೆ ಮತ್ತು ಅಲ್ಲಿರತಕ್ಕ ಆಚ್ಚು ಕಟ್ಟಿಗೆ ನೀರು ಕೊಡುವುದಕ್ಕೆ ಆಶ್ವಾಸನೆ ಕೊಟ್ಟರೆ ಸಾಕು.

ಶ್ರೀ ಎಂ. ಎಂ. ಜೆ. ಸದ್ಯೋಜಾತ.—ಎಡ, ಬಲ, ಎರಡೂ ಕಡೆ ತೆಗೆಯುತ್ತಿದ್ದೇವೆ.

ಅಧ್ಯಕ್ಷರು.—ಎಡಗಡೆ ಮತ್ತು ಬಲಗಡೆ ತೆಗೆಯುತ್ತಿದ್ದೇವೆ ಎಂದು ಹೇಳಿದ್ದಾರೆ.